ದಿನಾಂಕ : 20-07-2022

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ ಎಂ.ಎಸ.ಬಿ. ವಕೀಲರಿಂದಃ

ಬೈಲಹೊಂಗಲದ ಕೀರ್ತಿ ಫೈನಾನ್ಸನಲ್ಲಿ ನಾನು ಪಾಲುದಾರರನು ಇರುವೆನು ಎಂದರೆ ಸರಿಯಲ್ಲ. ಈಗಲೂ ಸಹ ನಾನು ಅಲ್ಲಿ ಪಾಲುದಾರನಾಗಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ಮನೆಯ ಕೆಲಸ ಮಾಡುತ್ತಾರೆ ಎಂದರೆ ಸರಿ. ನನಗೆ ಆಕೆಯ ಯಜಮಾನರ ಮೂಲಕ ಪ್ರತಿವಾದಿ ಪರಿಚಯವಾದರು. ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಪ್ರತಿವಾದಿಯ ಗಂಡನ ಆಸ್ತಿ ಎಂದರೆ ಸರಿ. ಪ್ರತಿವಾದಿಯ ಗಂಡ ತನ್ನ ಹೆಂಡತಿಯಾದ ಪ್ರತಿವಾದಿಯ ಹೆಸರಿನಲ್ಲಿ ಪ್ಲಾಟನ್ನು ಖರೀದಿ ಮಾಡಿ ಮನೆ ಕಟ್ಟಿಸಿರುವರು ಎಂದರೆ ಸರಿ. ಸಾಕ್ಷಿ ಸ್ವಲ್ಪ ಹೊತ್ತಿನ ನಂತರ ಗೊತ್ತಿಲ್ಲ ಎಂದು ನುಡಿದರು. ಪ್ರತಿವಾದಿಗೆ ಆಕೆಯ ಮಗ ಕಾರ್ಪೆಂಟರ ಕೆಲಸ ಮಾಡುತ್ತಿದ್ದ ಕಾರಣ ಆತನ ಕೆಲಸಕ್ಕೆ ಬೇಕಾದ ಸಲಕರಣೆಗಳನ್ನು ಕೊಳ್ಳಲು ಹಾಗೂ ಆಕೆಯ ಮಗಳ ಮದುವೆಗೆ ಹಣದ ಅವಶ್ಯಕತೆ ಇತ್ತು ಎಂದರೆ ಸರಿ. ಹಣದ ಅಡಚಣೆ ಇರುವ ವಿಚಾರವನ್ನು ಪ್ರತಿವಾದಿಯ ಮಗನಾದ ಮಲಿಕಜಾನ ಇವರು ಮಕ್ಬೂದ ಕಿತ್ತೂರ ಅವರಿಗೇ ಹೇಳಿದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಮಕ್ಬೂದ ಕಿತ್ತೂರು ಸಾಲದ ಹಣವನ್ನು ಕೀರ್ತಿ ಫೈನಾನ್ಸನಲ್ಲಿ ಕೊಡಿಸುತ್ತೇನೆ ಎಂದು ಹೇಳಿದರು ಎಂದರೆ ನನಗೆ ಗೊತ್ತಿಲ್ಲ.ಮಕ್ಬೂದ ಕಿತ್ತೂರು ಮತ್ತು ಮಲಿಕಜಾನ ಅವರು ನಮ್ಮ ಬ್ಯಾಂಕಿಗೆ ಬಂದು ರೂ. 1 ಲಕ್ಷ ಸಾಲವನ್ನು ಕೇಳಿದರು ಎಂದರೆ ನನಗೆ ಗೊತ್ತಿಲ್ಲ. ಆ ವಿಚಾರ ನನಗೆ ಗೊತ್ತಿದ್ದರೂ ಸಹ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮಲಿಕಜಾನನ ಬಳಿ ಆಸ್ತಿಯನ್ನು ಭದ್ರತೆಗಾಗಿ ಕೊಟ್ಟರೆ ಸಾಲ ಕೊಡುವುದಾಗಿ ಹೇಳಿದೆನು ಎಂದರೆ ಸರಿಯಲ್ಲ. ಮಕ್ಬೂದ ಕಿತ್ತೂರ ಅವರು ದಾವಾ ಸ್ವತ್ತು ಪ್ರತಿವಾದಿಯ ಹೆಸರಿನಲ್ಲಿ ಇರುವುದರ ಬಗ್ಗೆ ನನಗೆ ತಿಳಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಸದರಿ ದಾವಾ ಸ್ವತ್ತು ಪ್ರತಿವಾದಿಯ ಗಂಡನಿಗೆ ಸೇರಿದ್ದು ಎಂದೂ ಕೂಡ ನನ್ನ ಬಳಿ ಮಕ್ಬೂದ ಕಿತ್ತೂರ ಹೇಳಿದ್ದರು ಎಂದರೆ ನನಗೆ ಗೊತ್ತಿಲ್ಲ. ಮಕ್ಬೂದ ಕಿತ್ತೂರ ಅವರು ದಾವಾ ಸ್ವತ್ತು ಸದರಿಯವರ ಗಂಡ ಮತ್ತು ಮಕ್ಕಳ ಸ್ವಾಧೀನದಲ್ಲಿದೆ ಎಂದು ಹೇಳಿದ್ದರು ಎಂದರೆ ಪ್ರತಿವಾದಿಯ ಸ್ವಾಧೀನದಲ್ಲಿ ಇದ್ದ ಬಗ್ಗೆ ಮಾತ್ರ ಹೇಳಿದ್ದರು. ಕರಾರನ್ನು ಕೇವಲ ಭದ್ರತೆಗಾಗಿ ಬರೆಸಿಕೊಂಡಿದ್ದು ಸ್ವಾಧೀನತೆಯಲ್ಲಿ ಮುಂದುವರೆಯಬಹುದು ಎಂದು ನಾನು ಪ್ರತಿವಾದಿಗೆ ಹೇಳಿದ್ದೆನು ಎಂದರೆ ಸರಿಯಲ್ಲ. ಅದಕ್ಕೆ ಪ್ರತಿವಾದಿಯರು ಒಪ್ಪಿ ಫೈನಾನ್ಸದಿಂದ ದಿಃ 29-01-2014 ರಂದು ರೂ. 1 ಲಕ್ಷ ಸಾಲ ಪಡೆದರು ಎಂದರೆ ನನಗೂ ಫೈನಾನ್ಸಗೂ ಸಂಬಂಧ ಇರುವುದಿಲ್ಲ. ನಿಪಿ 1 ನ್ನು ತಯಾರಿಸಲು ನಾನು ಮಾಹಿತಿ ನೀಡಿದ್ದೇನೆ ಎಂದರೆ ಸರಿ. ಆ ರೀತಿ ಬಾಂಡ ತಯಾರಾದ ನಂತರ ನಾನು ಪ್ರತಿವಾದಿಯ ಸಹಿ

ತೆಗೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ನೊಂದಣಿ ಆಫೀಸಿನಲ್ಲಿ ಆಕೆಯ ಸಹಿಯನ್ನು ಪಡೆದುಕೊಂಡಿರುವರು. ಪ್ರತಿವಾದಿ ಬಾಂಡಗೆ ಹೆಬ್ಬೆಟ್ಟಿನ ಸಹಿ ಹಾಕಿರುವರು ಎಂದರೆ ಸರಿ. ಪ್ರತಿವಾದಿಗೆ ಕರಾರು ಪತ್ರದ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಕರಾರು ಪತ್ರದಲ್ಲಿರುವ ಷರತ್ತುಗಳನ್ನು ಪ್ರತಿವಾದಿಗೆ ಓದಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಆ ಬಗ್ಗೆ ಆಕೆಗೂ ಗೊತ್ತಿದೆ ಮತ್ತು ಆಕೆಯ ಮಕ್ಕಳಿಗೂ ಗೊತ್ತಿದೆ. ಕರಾರು ಪತ್ರಕ್ಕೆ ಪ್ರತಿವಾದಿ ಯಾವುದೇ ಒಪ್ಪಿಗೆ ಸೂಚಿಸಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ಅಶಿಕ್ಷಿತರಿರುವರು ಎಂದರೆ ಸರಿ. ಆಕೆಗೆ ವ್ಯವಹಾರ ಜ್ಞಾನ ಇಲ್ಲ ಎಂದರೆ ಸರಿಯಲ್ಲ.

<u>ಮುಂದುವರೆದ ಪಾಟೀ ಸವಾಲುಃ</u> ಸಮಯ ಕೋರಿದ ಕಾರಣ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಪ್ರ.ದಿ.ನ್ಯಾ ಮತ್ತು ಪ್ರ.ದ.ನ್ಯಾದಂ.ನ್ಯಾಬೈಲಹೊಂಗಲ